# ಬೆಂಗಳೂರು ವಿಶ್ವವಿದ್ಯಾಲಯ

NAAC Accredition "A" GRADE

ಜ್ಞಾನಭಾರತಿ ಆವರಣ, ಬೆಂಗಳೂರು-56

ಸಂಖ್ಯೆ: ವಿ.ಕಾ.ಶಾ.-1/ಯು.ಜಿ./ಕ್ರೀಡಾ ಶುಲ್ಕ/ಸದ್ಬಳಕೆ/2018-19 ದಿನಾಂಕ: 12.12.2018

**-:: ನೆನಪೋಲೆ-1 ::-**

ವಿಷಯ: ಸಂಯೋಜಿತ ಕಾಲೇಜುಗಳಲ್ಲಿ ಕ್ರೀಡೆಗಳನ್ನು ಉತ್ತೇಜಿಸುವ ಸಲುವಾಗಿ ಪ್ರತಿ ವಿದ್ಯಾರ್ಥಿಯಿಂದ ಪಡೆಯುತ್ತಿರುವ ಕ್ರೀಡಾ ಶುಲ್ಕದಲ್ಲಿ 30ರಷ್ಟು ಹಣವನ್ನು ಕ್ರೀಡಾ ಸಲುವಾಗಿ ಸದ್ಬಳಕೆ ಮಾಡಿಕೊಂಡಿರುವ ಬಗ್ಗೆ ಕಾಲೇಜುಗಳು ವಿಶ್ವವಿದ್ಯಾಲಯಕ್ಕೆ ವರದಿ ಸಲ್ಲಿಸದಿರುವ ಬಗ್ಗೆ.

ಉಲ್ಲೇಖ: 1.ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಡಿಪಿಇ/ಕ್ರೀಡಾಶುಲ್ಕ/2016-17, ದಿನಾಂಕ:29.07.2016
2.ಸುತ್ತೋಲೆ ಸಂಖ್ಯೆ:ವಿ.ಕಾ.ಶಾ.-1/ಯು.ಜಿ./ಕ್ರೀಡಾಶುಲ್ಕ/ಸದ್ಬಳಕೆ/2018-19, ದಿ:4.5.2018.
3.2016-17ನೇ ಸಾಲಿನ ಲೆಕ್ಕ ಪರಿಶೋಧನ ವರದಿ ಸಂಖ್ಯೆ: ಅನಿ/ಬೆಂಪ್ರಾಕ/ಸಿ-4/ಬೆಂ.ವಿ.-ವಿ.ಲೆ.ಪ.ವ/2018-19/211, ದಿನಾಂಕ: 22.06.2018
4. 2017-18ನೇ ಸಾಲಿನ ಸರ್ಕಾರಿ ಲೆಕ್ಕ ಪರಿಶೋಧಕರ ವಿಚಾರಣಾ ಪತ್ರ ಸಂಖ್ಯೆ:31, ದಿನಾಂಕ: 01.12.2018
5. ಕುಲಪತಿಗಳ ಅನುಮೋದನೆ ದಿನಾಂಕ: 10.12.2018

** * **

ದಿನಾಂಕ: 04.05.2018ರ ವಿಶ್ವವಿದ್ಯಾಲಯದ ಸುತ್ತೋಲೆಯನ್ನು ಮುಂದುವರೆಸುತ್ತಾ, 2016-17ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ, ದಿನಾಂಕ: 12.05.2016ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾಲೇಜುಗಳು ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಯಿಂದ ನಿಯಮಾನುಸಾರ ವಸೂಲಿ ಮಾಡುವ ಕ್ರೀಡಾ ಶುಲ್ಕದಲ್ಲಿ ಶೇ.30ರಷ್ಟನ್ನು ಮುರುಗಡೆ ಮಾಡಿಕೊಂಡು, ಉಳಿದ ಶೇ.70ರಷ್ಟು ಹಣವನ್ನು ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಲು ಷರತ್ತುಗಳೊಂದಿಗೆ ದಿನಾಂಕ:29.07.2016ರಂದು ಆದೇಶಿಸಲಾಗಿದೆ. ಆದರೆ, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಪದವಿ ಕಾಲೇಜುಗಳು 2016-17 ಮತ್ತು 2017-18ನೇ ಶೈಕ್ಷಣಿಕ ಸಾಲಿನಲ್ಲಿ ಶೇ.30 ರಷ್ಟು ಕ್ರೀಡಾ ಶುಲ್ಕವನ್ನು ಕ್ರೀಡಾ ಕಾರ್ಯಕ್ರಮ/ಚಟುವಟಿಕೆಗಳಿಗಾಗಿ ಸದ್ಬಳಕೆ ಮಾಡಿಕೊಂಡಿರುವ ಬಗ್ಗೆ ವರಧಿಯನ್ನು ಈವರೆಗೂ ವಿಶ್ವವಿದ್ಯಾಲಯಕ್ಕೆ ನೀಡಿರುವುದಿಲ್ಲ.

**ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳು 2016-17 ಮತ್ತು 2017-18ನೇ ಶೈಕ್ಷಣಿಕ ಸಾಲಿನಲ್ಲಿ ಶೇ.30 ರಷ್ಟು ಕ್ರೀಡಾ ಶುಲ್ಕವನ್ನು ಕ್ರೀಡಾ ಚಟುವಟಿಕೆಗಳಿಗಾಗಿ ಸದ್ಬಳಕೆ ಮಾಡಿರುವ ವರದಿಯನ್ನು ಮೂಲ ರಶೀದಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸದಿದ್ದಲ್ಲಿ, ಸದರಿ ಮೊತ್ತವನ್ನು ವಿಶ್ವವಿದ್ಯಾಲಯದ ನಿಧಿಗೆ ದಿನಾಂಕ: 17.12.2018ರ ಒಳಗಾಗಿ ಪಾವತಿಸಲು ಸೂಚಿಸಿದೆ. ಹಾಗೂ 2, 3, 4ನೇ ವರ್ಷದ ವಿದ್ಯಾರ್ಥಿಗಳ ಕೋರ್ಸುವಾರು ಪಟ್ಟಿಯನ್ನು ವಿದ್ಯಾಕಾರ್ಯ ಶಾಖೆ-1, ಆಡಳಿತ ಕಛೇರಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿಗೆ ಅತ್ಯಂತ ಜರೂರಾಗಿ ಸಲ್ಲಿಸಲು ಅಂತಿಮವಾಗಿ ಸೂಚಿಸಲಾಗಿದೆ.**

**ಸೂಚನೆ:**

**ಸಂಬಂಧಪಟ್ಟ ವರದಿ / ವಿ.ವಿ. ನಿಧಿಗೆ ಪಾವತಿ ಮಾಡಿರುವ ರಶೀದಿ ಮತ್ತು 2, 3, 4ನೇ ವರ್ಷದ ವಿದ್ಯಾರ್ಥಿಗಳ ಕೋರ್ಸುವಾರು ಪಟ್ಟಿ ಹಾಗೂ 2, 3, 4ನೇ ವರ್ಷದ ಕ್ರೀಡಾಶುಲ್ಕ ಮತ್ತು ಸಾಂಸ್ಕೃತಿಕ ಶುಲ್ಕ (ಪ್ರತಿ ವಿದ್ಯಾರ್ಥಿಗೆ ರೂ.610/- ರಂತೆ)ವನ್ನು ಪಾವತಿಸಿ ದಿನಾಂಕ: 17.12.2018ರ ಒಳಗಾಗಿ ಸಲ್ಲಿಸದಿದ್ದಲ್ಲಿ, ಸಂಬಂಧಪಟ್ಟ ಕಾಲೇಜಿನ 3 ರಿಂದ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪರೀಕ್ಷಾ ಪಲಿತಾಂಶವನ್ನು ತಡೆಹಿಡಿಯಲಾಗುವುದು.**

ಆದೇಶಾನುಸಾರ

ಕುಲಸಚಿವರು 12/12/2018

ಗೆ,

ಪ್ರಾಂಶುಪಾಲರು, ಬೆಂಗಳೂರು ವಿಶ್ವವಿದ್ಯಾಲಯ ಸಂಯೋಜಿತ ಕಾಲೇಜುಗಳು

ಪ್ರತಿ:

1. ಕುಲಸಚಿವರು (ಮೌಲ್ಯಮಾಪನ) / ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56.
2. ನಿರ್ದೇಶಕರು, ದೈಹಿಕ ಶಿಕ್ಷಣ ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56.
3. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳು/ಕುಲಸಚಿವರು/ಕುಲಸಚಿವರು (ಮೌ), ವಿತ್ತಾಧಿಕಾರಿಗಳು, ಬೆಂ.ವಿ.ಬೆಂ.
4. ಕಛೇರಿ ಪ್ರತಿ.